# ಆನಂದ ಪಾಟೀಲ

# ಮಕ್ಕಳ ಪದ್ಯಗಳು

## ಟಾಮ್ ಟಾಮ್ ಟಾಮ್

ಟಾಮ್ ಟಾಮ್ ಟಾಮ್
ಟಾಮ್ ಟಾಮ್ ಟಾಮ್
ಹೊಟ್ಟೆ ಒಂದು ಬರ್ತಿತ್ತು!

ಗುಡ್ಡೆ ಗುಡಾಣದ
ಗುಡು ಗುಡು ಗುಡು ಗುಡು
ಮೊಟ್ಟೆ ಉರುಳುತ ಬರ್ತಿತ್ತು!

ಉದ್ದಕೆ ಹಾಯ್ದು
ಎಂಜಿನ್ ಮೂಗು
ಬುಸುಬುಸು ಬುಸುಬುಸು ಎನುತಿತ್ತು!

ಹಳಿಯೇ ಇಲ್ಲದೆ
ದಡಬಡ ದಡಬಡ
ಫಾಸ್ಟ್ ಎಕ್ಸ್‌ಪ್ರೆಸ್ ಬರುತಿತ್ತು!

ಬಂತಪಾ ಬಂತು
ಬಂತು ಬಂತು
ಹೌದು ಹಂದಿ ಬಂತು!

ಬಂತು ಬಂತು ಬಂತು
ಧೊಪ್ ಅಂತ ಬಿತ್ತು!

ಕಚಕ್ ಪಚಕ್ ಕೆಸರಲ್ಲಿ
ಮುಳಗ್ ಮುಳಗ್ಹೋಯ್ತು!
ಪುಟ್ ಮರಿ ಇಲ್ವೆ? ಇಲ್ವೆ?
ಇದೆ ಇದೆ ಇದೆ ಇದೆ ಅಲ್ಲಿ
ಹಿಂದುಗಡೆ ಹಾಯ್ ಅಲ್ಲಿ
ಬಾಲದ ತುದಿಯಲಿ jolly!

